## ಸೂಕ್ತಿಪ್ರಭ

ಶಿಕ್ಷಣವು ಓದಬಲ್ಲ, ಆದರೆ ಯಾವುದನ್ನು ಓದ ಬೇಕೆಂಬುದನ್ನು ಅರಿಯದ ಬಹು ಸಂಖ್ಯಾತರನ್ನು ಸೃಷ್ಟಿಸಿದೆ. —ಜಿ. ಎಂ. ಟ್ರೆವೆಲ್ಯಾನ್ (Trevelyan).

ನಿನ್ನ ತಲೆಯಲ್ಲಿ ರಂಧ್ರವಿದೆಯೆಂದು ಸಾರಣಿಯು ಸೂಜಿಗೆ ಹೇಳುತ್ತದೆ. — ಭಾರತೀಯ ಗಾದೆ

ಕ್ಷಮಿಸದಿರುವುದೇ ಅಕ್ಷಮ್ಯ ಅಪರಾಧ.
—ಮಾಲ್ಕೋಮ್ ಫಾರ್ಬಿಸ್ (Molcom Forbes).

ನೀವೇನೇ ಮಾಡಿದರೂ ಅದು ಅಮುಖ್ಯ, ಆದರೆ ನೀವದನ್ನು ಮಾಡುವುದು ಮುಖ್ಯ.
— ಮಹಾತ್ಮಾ ಗಾಂಧಿ.

ವಿಧೇಯತೆಯಿಲ್ಲದ ಸ್ವಾತಂತ್ರ್ಯ ಒಂದು ಗೊಂದಲ, ಸ್ವಾತಂತ್ರ್ಯವಿಲ್ಲದ ವಿಧೇಯತೆ ದಾಸ್ಯ.
—ವಿಲಿಯಂ ಪೆನ್ನ್ (William Penn)

ನೀವು ಪ್ರಯತ್ನಿಸುವವರೆಗೂ ನೀವೇನು ಮಾಡಬಲ್ಲಿರಿ ಎಂಬುದು ನಿಮಗರಿವಾಗದು.
— ಪಿ. ಮ್ಯಾಕ್‌ಲಾರೆನ್ (Macloren)

ನಿಮಗೆ ಮೋಸಮಾಡದ ಸ್ನೇಹಿತನೆಂದರೆ ಮೌನ.
—ಕನ್‌ಫ್ಯೂಸಿಯಸ್

ಪರಹಿತಕ್ಕಾಗಿ ಬಾಳದವ ತನ್ನ ಹಿತವನ್ನೂ ಕಳೆದು ಕೊಳ್ಳುತ್ತಾನೆ. — ಸುಭಾಷಿತ.

ನಮಗಾಗಿ ನಾವು ಮಾಡಿಕೊಂಡಿರುವುದೆಲ್ಲ ನಮ್ಮೊಂದಿಗೆ ಸಾಯುತ್ತದೆ. ಇತರರಿಗಾಗಿ ಮತ್ತು ಜಗತ್ತಿಗಾಗಿ ಮಾಡಿದುದು ಶಾಶ್ವತವಾಗಿ ಉಳಿಯು ತ್ತದೆ. — ಆಲ್ಬರ್ಟ್ ಪೈಕ್ (Albert Pike)

ಅಧಿಕಾರ ಮನುಷ್ಯರನ್ನು ಭ್ರಷ್ಟಗೊಳಿಸುವುದಿಲ್ಲ, ಆದರೆ ಮೂರ್ಖರಿಗೆ ಅಧಿಕಾರ ಸಿಕ್ಕಿದರೆ ಅದನ್ನೇ ಭ್ರಷ್ಟಗೊಳಿಸುತ್ತಾರೆ.— ಜಾರ್ಜ್ ಬರ್ನಾರ್ಡ್ ಷಾ

ಒಂದು ಪ್ರೀತಿಪೂರ್ವಕ ಕ್ರಿಯೆ ಈ ಜಗತ್ತಿನ ಎಲ್ಲ ಸುಂದರಭಾವಗಳನ್ನೂ ಮೀರಿಸುತ್ತದೆ.
**— ಜೇಮ್ಸ್ ರಸೆಲ್ ಲೋವೆಲ್**
**(James Russel Lowell)**

ವಿವೇಕವೆಂದರೆ ಈ ಕ್ಷಣವನ್ನು ಪೂರ್ತಿಗೊಳಿಸುವುದು, ರಸ್ತೆಯ ಪ್ರತಿ ಹೆಜ್ಜೆಯಲ್ಲಿಯೂ ಪ್ರಯಾಣದ ಕೊನೆಯನ್ನು ಕಾಣುವುದು ಮತ್ತು ಅತಿ ಹೆಚ್ಚು ಸತ್ಕಾಲದಲ್ಲಿ ಕಳೆಯುವುದು.
— ಎಮರ್ಸನ್ (Emerson)

## ಪ್ರಾರ್ಥನೆ

**"ಶ್ರೀ ಅಭಿಲಾಷಾಷ್ಟಕ" ದಿಂದ**

ಏಕಂ ಬ್ರಹ್ಮೈವಾದ್ವಿತೀಯಂ ಸಮಸ್ತಂ
ಸತ್ಯಂ ಸತ್ಯಂ ನೇಹ ನಾನಾಸ್ತಿ ಕಿಂಚಿತ್ ।
ಏಕೋ ರುದ್ರೋ ನದ್ವಿತೀಯೋಽವತಸ್ಥೇ
ತಸ್ಮಾದೇಕಂ ತ್ವಾಂ ಪ್ರಪದ್ಯೇ ಮಹೇಶಮ್ ॥ ೧ ॥

ಸಮಸ್ತವೂ ಏಕವಾದ ಅದ್ವಿತೀಯವಾಗಿರುವ ಬ್ರಹ್ಮ; ಸತ್ಯವಾಗಿ ಪ್ರಪಂಚದಲ್ಲಿ ಮತ್ತಾವುದೂ ಇಲ್ಲ; ರುದ್ರನೊಬ್ಬನೇ ಇರುವನು, ಎರಡನೆಯದು ಯಾವುದೂ ಇಲ್ಲ; ಆದಕಾರಣ ಮಹೇಶನಾದ ನಿನ್ನಲ್ಲಿ ನಾನು ಶರಣಾಗುತ್ತೇನೆ.

ಏಕಃ ಕರ್ತಾ ತ್ವಂ ಹಿ ಸರ್ವಸ್ಯ ಶಂಭೋ
ನಾನಾರೂಪೇಷ್ವೇಕರೂಪೋಽಸ್ಯರೂಪಃ ।
ಯದ್ವತ್ ಪ್ರತ್ಯಗ್ಜ್ವರ್ಕ ಏಕೋಽಪ್ಯನೇಕ-
ಸ್ತಸ್ಮಾನ್ನಾನ್ಯಂ ತ್ವಾಂ ವಿನೇಶಂ ಪ್ರಪದ್ಯೇ ॥ ೨ ॥

ಹೇ, ಶಂಭು, ನಿಜವಾಗಿಯೂ ನೀನೊಬ್ಬನೇ ಕರ್ತೃ; ಸೂರ್ಯ ಒಬ್ಬನೇ ಆದರೂ ಹಲವು ಪಾತ್ರಗಳಲ್ಲಿ ಪ್ರತಿಬಿಂಬಿಸುವಾಗ ಅನೇಕ ಸೂರ್ಯರಂತೆ ಕಾಣುವ ಹಾಗೆ ನೀನು ಅರೂಪನಾದರೂ ನಾನಾ ರೂಪಗಳಲ್ಲಿ ಏಕರೂಪವಾಗಿದ್ದೀಯೆ; ಆದಕಾರಣ ನಿನ್ನ ವಿನಾ ಇನ್ನು ಯಾರಲ್ಲಿಯೂ ನಾನು ಶರಣಾಗತನಾಗುವುದಿಲ್ಲ.

ನೋ ವೇದಸ್ತ್ವಾಮೀಶ ಸಾಕ್ಷಾದ್ಧಿ ವೇದ
ನೋ ವಾ ವಿಷ್ಣುರ್ನೋ ವಿಧಾತಾಖಿಲಸ್ಯ ।
ನೋ ಯೋಗೀಂದ್ರಾ ನೇಂದ್ರಮುಖ್ಯಾಶ್ಚ ದೇವಾ
ಭಕ್ತೋ ವೇದ ತ್ವಾಮತಸ್ತ್ವಾಂ ಪ್ರಪದ್ಯೇ ॥ ೩ ॥

ವೇದಗಳೂ ಕೂಡ ನಿನ್ನನ್ನು ಸಾಕ್ಷಾತ್ತಾಗಿ ಅರಿಯಲಾರವು! ವಿಷ್ಣುವಾಗಲಿ, ಬ್ರಹ್ಮನಾಗಲಿ, ಪರಮಯೋಗಿಗಳಾಗಲಿ, ಇಂದ್ರನಿಂದ ಒಡಗೂಡಿದ ದೇವತೆಗಳಾಗಲಿ ನಿನ್ನನ್ನು ಅರಿಯಲಾರರು; ಆದರೆ ಭಕ್ತನು ನಿನ್ನನ್ನು ಅರಿಯುವನು; ಆದಕಾರಣ ನಾನು ನಿನ್ನಲ್ಲಿ ಶರಣಾಗತನಾಗುವೆನು.

ನೋ ತೇ ಗೋತ್ರಂ ನಾಪಿ ಜನ್ಮಾಪಿ ನಾಖ್ಯಾ
ನೋ ವಾ ರೂಪಂ ನೈವ ಶೀಲಂ ನ ದೇಶಃ ।
ಇತ್ಥಂ ಭೂತೋಽಪೀಶ್ವರಸ್ತ್ವಂ ತ್ರಿಲೋಕ್ಯಾಃ
ಸರ್ವಾನ್ಕಾಮಾನ್ಪೂರಯೇಸ್ತದ್ಭಜೇ ತ್ವಾಮ್ ॥ ೪ ॥

ನಿನಗೆ ಗೋತ್ರವಿಲ್ಲ, ಜನ್ಮವಿಲ್ಲ, ನಾಮವಿಲ್ಲ; ನಿನಗೆ ರೂಪವಿಲ್ಲ, ಶೀಲವಿಲ್ಲ, ದೇಶವಿಲ್ಲ; ನೀನು ಹೀಗಿದ್ದರೂ ತ್ರಿಲೋಕಗಳಿಗೆ ಒಡೆಯನು, ಎಲ್ಲರ ಇಚ್ಛೆಯನ್ನೂ ಈಡೇರಿಸುವೆ; ಆದಕಾರಣ ನಾನು ನಿನ್ನನ್ನು ಭಜಿಸುತ್ತೇನೆ.

ತ್ವತ್ತಃ ಸರ್ವಂ ತ್ವಂ ಹಿ ಸರ್ವಂ ಸ್ಮರಾರೇ
ತ್ವಂ ಗೌರೀಶಸ್ತ್ವಂ ಚ ನಗ್ನೋಽತಿಶಾಂತಃ ।
ತ್ವಂ ವೈ ವೃದ್ಧಸ್ತ್ವಂ ಯುವಾ ತ್ವಂ ಚ ಬಾಲ-
ಸ್ತತ್ಕಿಂ ಯತ್ತ್ವಂ ನಾಸ್ಯತಸ್ತ್ವಾಂ ನತೋಽಸ್ಮಿ ॥ ೫ ॥

ಹೇ ಸ್ಮರಾರಿ, ಎಲ್ಲವೂ ನಿನ್ನಿಂದಲೇ ಜನಿಸಿದೆ; ನೀನೇ ಎಲ್ಲವೂ ಆಗಿರುವೆ; ನೀನೇ ಗೌರೀಪತಿ, ಉಪಾಧಿಗಳಿಲ್ಲದ ನಗ್ನನು ಮತ್ತು ಶಾಂತಸ್ವರೂಪನು; ನೀನೇ ವೃದ್ಧ, ಯುವಕ ಮತ್ತು ಬಾಲಕ; ನೀನಿಲ್ಲದಿರುವುದು ಪ್ರಪಂಚದಲ್ಲಿ ಏನಿರುವುದು? ಆದಕಾರಣ ನಾನು ನಿನಗೆ ನಮಿಸುವೆನು.